ದಿನಾಂಕಃ **03.08.2026**

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಪಿ.ಡಿ.ಟಿ. ವಕೀಲರಿಂದಃ

ನಾನು ಹೊಸಕೆರೆ ಗ್ರಾಮದಲ್ಲಿ ಜನಿಸಿರುತ್ತೇನೆ. ವಾದಿ ಮತ್ತು 2 ನೇ ಪ್ರತಿವಾದಿ ಸಹ ಹೊಸಕೆರೆ ಗ್ರಾಮದಲ್ಲಿ ಜನಿಸಿರುತ್ತಾರೆ ಎಂದರೆ ಸರಿ. 4 ನೇ ಪ್ರತಿವಾದಿಯ ತವರೂರು ಶಿರಾ ತಾಲ್ಲೂಕಿನ ಆನೇನಹಳ್ಳಿ, 4 ನೇ ಪ್ರತಿವಾದಿಗೆ ಅವರ ತವರು ಮನೆಯಿಂದ ಯಾವುದೇ ಪಿತ್ರಾರ್ಜಿತ ಆಸ್ತಿಗಳು ಬಂದಿರುವುದಿಲ್ಲ. ನನ್ನ ತಂದೆ ಮಾಲತಃ ಹೊಸಕೆರೆ ಗ್ರಾಮದ ನಿವಾಸಿ. ನನ್ನ ತಂದೆಗೆ ಇಬ್ಬರು ತಮ್ಮಂದಿರು ಇರುತ್ತಾರೆ. ನನ್ನ ತಂದೆಗೆ ಅವರ ತಂದೆ ಮತ್ತು ತಾತನಿಂದ ಯಾವುದೇ ಆಸ್ತಿ ಬಂದಿರುವುದಿಲ್ಲ. ಸಾಕ್ಷಿ ಮುಂದುವರೆದು ಹೊಸಕೆರೆ ಗ್ರಾಮದ ಸರ್ವೆ ನಂಬರ್.49 ರಲ್ಲಿ 3 ಎಕರೆ 11 ಗುಂಟೆ ಜಮೀನು ನನ್ನ ತಂದೆಗೆ ಅವರ ತಾಯಿ ಗಂಗಮ್ಮರವರಿಂದ ಬಂದಿರುತ್ತದೆ. ಸದರಿ ಜಮೀನು ಗಂಗಮ್ಮರವರಿಗೆ ಅವರ ಅಕ್ಕ ತಂಗಿಯ ಕಡೆಯಿಂದ ಬಂದಿರುತ್ತದೆ ಎಂದು ಉತ್ತರಿಸುತ್ತಾರೆ. ಸದರಿ 3 ಎಕರೆ 11 ಗುಂಟೆ ಜಮೀನು ಗಂಗಮ್ಮ ತೀರಿಕೊಂಡ ನಂತರ ನನ್ನ ತಂದೆ ಮತ್ತು ಅವರ ಅಣ್ಣ ತಮ್ಮಂದಿರು ವಿಭಾಗ ಮಾಡಿಕೊಂಡಿರುತ್ತಾರೆ. ಸದರಿ ವಿಭಾಗ ಇಂದಿಗೆ ಸುಮಾರು 10 ವರ್ಷಗಳ ಹಿಂದೆ ಆಗಿರುತ್ತದೆ. ಸದರಿ ವಿಭಾಗದಲ್ಲಿ 1 ಎಕರೆ 20 ಗುಂಟೆ ಜಮೀನು ಮಲ್ಲೇಶಪ್ಪರವರ ಪಾಲಿಗೆ ಉಳಿದ ಜಮೀನಿನಲ್ಲಿ ನನ್ನ ತಂದೆ ಮತ್ತು ಬಸವರಾಜಪ್ಪ ತಲಾ ಅರ್ಧ ಜಮೀನನ್ನು ತೆಗೆದುಕೊಂಡಿರುತ್ತಾರೆ.

2. ಹೊಸಕೆರೆ ಗ್ರಾಮದಲ್ಲಿ ನನ್ನ ತಂದೆ ವಾಸವಾಗಿದ್ದಂತಹ ಮನೆ ಇರುತ್ತದೆ. ಸದರಿ ಮನೆ ಪೂರ್ವ ಪಶ್ಚಿಮ 22 ಅಡಿ ಉತ್ತರ ದಕ್ಷಿಣ 50 ಅಡಿ ಇರುತ್ತದೆ. ಸದರಿ ಮನೆಯನ್ನು ನನ್ನ ತಂದೆ

ಖರೀದಿ ಮಾಡಿರುತ್ತಾರೆ ಆದರೆ ದಿನಾಂಕ ಹೇಳಲು ಆಗುವುದಿಲ್ಲ. ಸದರಿ ಮನೆ ಖರೀದಿ ಮಾಡುವ ಪೂರ್ವದಲ್ಲಿ ನಿಮ್ಮ ತಂದೆ ಎಲ್ಲಿ ವಾಸವಾಗಿದ್ದರು ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ಹೊಲದಲ್ಲಿ ಕರೆಂಟ್ ರೂಮಿನಲ್ಲಿ ವಾಸವಾಗಿದ್ದರು ಎಂದು ಉತ್ತರಿಸುತ್ತಾರೆ. ನನ್ನ ತಂದೆ ನಿವೇಶನ ಖರೀದಿ ಮಾಡಿ ಮನೆ ಕಟ್ಟಿರುತ್ತಾರೆ. ಸದರಿ ಮನೆ ಕಟ್ಟಿದ ಸಮಯದಲ್ಲಿಯೇ ಅಂಗಡಿ ಮಳಿಗೆಗಳನ್ನು ಕಟ್ಟಿರುತ್ತಾರೆ ಎಂದರೆ ಸರಿ ಎಂದು ಉತ್ತರಿಸಿ ಸಾಕ್ಷಿ ಮುಂದುವರೆದು ಕೆಳಗಡೆ ನಮ್ಮ ತಂದೆ ಕಟ್ಟಿದ್ದರು ಮೇಲೆ ನಾವು ಕಟ್ಟಿರುತ್ತಾರೆ ಎಂದು ಉತ್ತರಿಸುತ್ತಾರೆ. ಸದರಿ ಅಂಗಡಿ ಮಳಿಗೆಗಳನ್ನು ಕಟ್ಟಿದ ನಂತರ ನಮ್ಮ ತಂದೆ ಅಲ್ಲಿ ವ್ಯಾಪಾರ ಪ್ರಾರಂಭಿಸಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. 1985 ರ ಪೂರ್ವದಲ್ಲಿ ಎಷ್ಟು ವರ್ಷಗಳ ಕಾಲ ನನ್ನ ತಂದೆ ಹೊಲದಲ್ಲಿ ಇದ್ದಂತಹ ಕರೆಂಟ್ ರೂಮಿನಲ್ಲಿ ವಾಸವಾಗಿದ್ದರು ಎಂದು ನನಗೆ ಗೊತ್ತಿರುವುದಿಲ್ಲ.

3. ನಾನು, ವಾದಿ ಮತ್ತು 2 ನೇ ಪ್ರತಿವಾದಿ ನನ್ನ ತಂದೆ ಹೊಲದಲ್ಲಿ ಕರೆಂಟ್ ರೂಮಿನಲ್ಲಿ ವಾಸವಾಗಿದ್ದಲೇ ಜನಿಸಿರುತ್ತೇವೆ. ಸದರಿ ಕರೆಂಟ್ ರೂಮ್ ಅನ್ನು ನಾನು ನೋಡಿರುತ್ತೇನೆ. ಸದರಿ ಕರೆಂಟ್ ರೂಮಿನ ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ನಾನು ಜನಿಸಿದ ನಂತರ ನನ್ನ ತಂದೆ ಮತ್ತು ಅವರ ಅಣ್ಣ ತಮ್ಮಂದಿರು ನಾನು ಮೇಲೆ ಹೇಳಿದಂತೆ ವಿಭಾಗ ಮಾಡಿಕೊಂಡಿರುತ್ತಾರೆ. ಕರೆಂಟ್ ರೂಮ್ ಇದ್ದಂತಹ ಜಮೀನಿನಲ್ಲಿ ನಿಮ್ಮ ತಂದೆ ವ್ಯವಸಾಯ ಮಾಡಿಕೊಂಡಿದ್ದರೆ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ಅಲ್ಲಿ ವ್ಯವಸಾಯ ಮಾಡುತ್ತಿದ್ದರು ಊರಿನಲ್ಲಿ ಅಂಗಡಿ ಇಟ್ಟುಕೊಂಡಿದ್ದರು ಎಂದು ಉತ್ತರಿಸುತ್ತಾರೆ. ಸದರಿ ಅಂಗಡಿಯನ್ನು ನನ್ನ ತಂದೆ ಸರ್ಕಾರಿ ಜಾಗದಲ್ಲಿ ಪೆಟ್ಟಿಗೆ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದರು. ಸದರಿ ಅಂಗಡಿಯಲ್ಲಿ ನನ್ನ ತಂದೆ ಬೀಡಿ, ಸಿಗರೇಟು ಮತ್ತು ತಿಂಡಿ ತಿನಿಸುಗಳ ವ್ಯಾಪಾರ ಮಾಡುತ್ತಿದ್ದರು. ಸದರಿ ಅಂಗಡಿಯನ್ನು ನನ್ನ ತಂದೆ ಯಾವ ವರ್ಷದಲ್ಲಿ ಪ್ರಾರಂಭಿಸಿರುತ್ತಾರೆ

ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಅಂಗಡಿಯಲ್ಲಿ ನಾನು ವಾದಿ ಕುಳಿತು ವ್ಯಾಪಾರ ಮಾಡಿರುವುದಿಲ್ಲ.

4. ವಾದಿಗೆ ಡಿಫಾರ್ಮ್ , ನನಗೆ 7 ನೇ ತರಗತಿ ನನ್ನ ಅಕ್ಕ 2 ನೇ ಪ್ರತಿವಾದಿಗೆ ದ್ವಿತೀಯ ಪಿಯುಸಿ ವರೆಗೆ ನನ್ನ ತಂದೆ ವಿಧ್ಯಾಭ್ಯಾಸ ಮಾಡಿಸಿರುತ್ತಾರೆ. ವಾದಿ 2003 ರಲ್ಲಿಯೇ ಮಧುಗಿರಿ ಸರ್ಕಾರಿ ಆಸ್ಪತ್ರೆ ರಸ್ತೆಯಲ್ಲಿ ಮೆಡಿಕಲ್ ಶಾಫ್ ಮತ್ತು ರಕ್ತ ಪರೀಕ್ಷಾ ಕೇಂದ್ರವನ್ನು ಪ್ರಾರಂಭಿಸಿರುತ್ತಾರೆ ಎಂದರೆ ಸರಿ. ಸುಮಾರು 15-20 ವರ್ಷಗಳ ಹಿಂದೆಯೇ 2 ನೇ ಪ್ರತಿವಾದಿಗೆ ಮದುವೆಯಾಗಿರುತ್ತದೆ ಎಂದರೆ ಸರಿ. ನನ್ನ ಮದುವೆ 2005 ರಲ್ಲಿ ಆಗಿರುತ್ತದೆ. ನಾನು ಪ್ರಾಪ್ತ ವಯಸ್ಕನಾದ ನಂತರ ಆಟೋ ಚಾಲನೆ ಮಾಡಿ ವರ್ಕ್ ಶಾಫ್ ನಲ್ಲಿ ಕೆಲಸ ಮಾಡಿ ಮತ್ತು ವ್ಯವಸಾಯ ಮಾಡಿ ಆಧಾಯಗಳಿಸುತ್ತಿದ್ದೇನು.

5. ನಾನು, ನನ್ನ ತಂದೆ, ವಾದಿ ಮತ್ತು 2 ನೇ ಪ್ರತಿವಾದಿ ಯಾವುದೇ ಲಿಖಿತ ವಿಭಾಗ ಪತ್ರವನ್ನು ಮಾಡಿಕೊಂಡಿರುವುದಿಲ್ಲ. ವಾದಿ ಅವರ 19 ನೇ ವಯಸ್ಸಿನಲ್ಲಿಯೇ ದುಡಿಯಲು ಪ್ರಾರಂಭಿಸಿರುತ್ತಾರೆ ಎಂದರೆ ಸರಿ. ನನ್ನ, ವಾದಿ ಮತ್ತು 2 ನೇ ಪ್ರತಿವಾದಿಯ ಮದುವೆಯನ್ನು ನನ್ನ ತಂದೆಯೇ ಮಾಡಿರುತ್ತಾರೆ. ನನಗೆ ಬುದ್ಧಿ ಬಂದಾಗ ಪೆಟ್ಟಿಗೆ ಅಂಗಡಿಯಿಂದ ನನ್ನ ತಂದೆಗೆ ಎಷ್ಟು ಆಧಾಯ ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ನನಗೆ ಬುದ್ಧಿ ಬಂದಾಗ ನನ್ನ ತಂದೆಗೆ ವ್ಯವಸಾಯದಿಂದ ಎಷ್ಟು ಆಧಾಯ ಬರುತ್ತಿತ್ತು ಎಂದು ನನಗೆ ಗೊತ್ತಿರುವುದಿಲ್ಲ.

6. ನಾನು ಮತ್ತು ವಾದಿ ಪ್ರಾಪ್ತ ವಯಸ್ಸಿಗೆ ಬಂದ ನಂತರ ಸಂಪಾದನೆ ಮಾಡಿದ ಹಣವನ್ನು ನನ್ನ ತಂದೆಗೆ ಕೊಡುತ್ತಿದ್ದೇವು ಎಂದರೆ ಸರಿ. ನಾನು ಮತ್ತು ವಾದಿ ಸಂಪಾದನೆ ಮಾಡಿ ನನ್ನ ತಂದೆಗೆ ನೀಡಿದ ಹಣ ಮತ್ತು ವ್ಯವಸಾಯದಿಂದ ಬಂದ ಆಧಾಯ ಎರಡು ಸೇರಿಸಿಕೊಂಡು

ನನ್ನ ತಂದೆ ಹೊಸಕೆರೆಯಲ್ಲಿ ನಿವೇಶನ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ನನ್ನ, ವಾದಿ ಮತ್ತು ನನ್ನ ತಂದೆಯ ಆಧಾಯ ಮತ್ತು ವ್ಯವಸಾಯದ ಆಧಾಯದಿಂದ ಹೊಸಕೆರೆಯಲ್ಲಿ ಖರೀದಿ ಮಾಡಿದ ನಿವೇಶನದಲ್ಲಿ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಹೊಸಕೆರೆ ಗ್ರಾಮದಲ್ಲಿ ಒಟ್ಟು ಕುಟುಂಬದ ಆಧಾಯದಿಂದ ಕಟ್ಟಡ ಕಟ್ಟಿರುತ್ತಾರೆ ಹೊರತು ಅವರ ವೈಯಕ್ತಿಕ ಆಧಾಯದಿಂದ ಕಟ್ಟಡ ಕಟ್ಟಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

7. ಹೊಸಕೆರೆ ಗ್ರಾಮದಲ್ಲಿ ಮನೆ ಕಟ್ಟಿಕೊಂಡು ಬಂದ ನಂತರ ನನ್ನ ತಾಯಿ ಮನೆ ಕೆಲಸ ಮಾಡಿಕೊಂಡು ಗೃಹಿಣಿಯಾಗಿ ಮನೆಯಲ್ಲಿಯೇ ಇದ್ದರು ಎಂದರೆ ಸರಿ. ನನ್ನ ತಾಯಿಗೆ ಸ್ವಂತ ಸಂಪಾದನೆ ಇಲ್ಲದ ಕಾರಣ ನನ್ನ, ವಾದಿ ಮತ್ತು ನನ್ನ ತಂದೆಯ ಆಧಾಯದಿಂದ ಜೀವನ ನಡೆಸುತ್ತಿದ್ದರು ಎಂದರೆ ಸರಿ. ನನ್ನ ಮದುವೆಯಾಗುವವರೆಗೂ ನಾನು ನನ್ನ ತಂದೆ ಕಟ್ಟಿರುವಂತಹ ಕಟ್ಟಡದಲ್ಲಿಯೇ ವಾಸವಾಗಿದ್ದೇನು ಎಂದರೆ ಸರಿ. ಹೊಸಕೆರೆಯಲ್ಲಿ ಇರುವಂತಹ ಕಟ್ಟಡ ನಮ್ಮ ಒಟ್ಟು ಕುಟುಂಬದ ಆಸ್ತಿ ಎಂದು ಸೂಚಿಸುವುದು ಸರಿಯಲ್ಲ.

8. ದಾವಾ 2 ನೇ ಸ್ವತ್ತನ್ನು ನನ್ನ ತಂದೆ 1977-78 ರಲ್ಲಿ ಖರೀದಿ ಮಾಡಿರುತ್ತಾರೆ. ದಾವಾ 4 ಮತ್ತು 5 ನೇ ಸ್ವತ್ತಗಳನ್ನು ನನ್ನ ತಂದೆ ತಾಯಿಯ ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆ ಆದರೆ ಯಾವ ವರ್ಷದಲ್ಲಿ ಖರೀದಿ ಮಾಡಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ದಾವಾ 6 ನೇ ಸ್ವತ್ತು ನನ್ನ ತಂದೆಯ ಹೆಸರಿನಲ್ಲಿ ಇತ್ತು ಅದನ್ನು ನನಗೆ ಧಾನಪತ್ರ ಬರೆದಿರುತ್ತಾರೆ. ದಾವಾ 4 ಮತ್ತು 5 ನೇ ಸ್ವತ್ತುಗಳನ್ನು ನನ್ನ ತಂದೆ ನನ್ನ, ವಾದಿ ಮತ್ತು ನನ್ನ ತಂದೆಯ ಆಧಾಯದಿಂದ ಖರೀದಿ ಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

9. 2003 ರಿಂದಲೇ ವಾದಿ ನನ್ನ ಮತ್ತು ನನ್ನ ತಂದೆಯ ಆಧಾಯಕ್ಕಿಂತ ಹೆಚ್ಚು ಆಧಾಯ ಗಳಿಸುತ್ತಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. 2011 ರವರೆಗೂ ನಾನು, ನನ್ನ ತಂದೆ, ವಾದಿ ಮತ್ತು 2 ನೇ ಪ್ರತಿವಾದಿ ಅನ್ಯೂನ್ಯವಾಗಿ ಇದ್ದೇವು ಎಂದು ಸೂಚಿಸುವುದು ಸರಿಯಲ್ಲ. ಯಾವ ವರ್ಷದವರೆಗೆ ನೀವು, ನಿಮ್ಮ ತಂದೆ ವಾದಿ ಮತ್ತು 2 ನೇ ಪ್ರತಿವಾದಿ ಅನ್ಯೂನ್ಯವಾಗಿ ಜೀವನ ನಡೆಸಿರುತ್ತೀರ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ಈ ದಾವೆಯನ್ನು ಹೂಡುವವರೆಗೂ ನಾವು ಅನ್ಯೂನ್ಯವಾಗಿ ಇದ್ದೇವು ಎಂದು ಉತ್ತರಿಸುತ್ತಾರೆ.

10. ನಿಮ್ಮ ತಂದೆ ತಾಯಿ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಮಾಡಿರುವ ದಾಖಲೆಗಳಿಗೆ ಸಂಬಂಧಿಸಿದಂತೆ ವಾದಿ 2014 ರಲ್ಲಿ ಯಾವ ಕಾರಣಕ್ಕಾಗಿ ನನ್ನ ಅನುಮತಿ ಪಡೆದುಕೊಳ್ಳದೆ ಮತ್ತು ನನಗೆ ತಿಳಿಸದೆ ದಾಖಲೆಗಳನ್ನು ಮಾಡಿರುತ್ತೀರ ಎಂದು ಜಗಳ ಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಈ ದಾವೆಯನ್ನು ಹೂಡುವ ಪೂರ್ವದಲ್ಲಿ ನಮ್ಮ ಕುಟುಂಬದ ಸದಸ್ಯರ ನಡುವೆ ಜಗಳವಾಗಿರುತ್ತದೆ. ಈ ದಾವೆಯನ್ನು ಹೂಡುವ ಎಷ್ಟು ದಿನಗಳ ಪೂರ್ವದಲ್ಲಿ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ಮಾಡಿದಂತಹ ದಾಖಲೆಗಳ ವಿಚಾರವಾಗಿ ನಮ್ಮ ಕುಟುಂಬದಲ್ಲಿ ಜಗಳವಾಗಿರುತ್ತದೆ ಎಂದು ಹೇಳಲು ಆಗುವುದಿಲ್ಲ.

11. ನನ್ನ ತಂದೆ ತಾಯಿಗೆ ತಲಾ ಮೂರು ಜನ ಮಕ್ಕಳು ಮೇಲೆ ಸಮವಾದ ಪ್ರೀತಿ, ವಿಶ್ವಾಸ ಮತ್ತು ವಾತ್ಸಲ್ಯ ಇತ್ತು ಎಂದರೆ ಸರಿ. ವಾದಿ ತನ್ನ ಮದುವೆಯಾದ ನಂತರ ಮಧುಗಿರಿಯಲ್ಲಿ ವಾಸಿಸಲು ಪ್ರಾರಂಭಿಸಿರುತ್ತಾರೆ ಎಂದರೆ ಸರಿ. ವಾದಿ ತನ್ನ ಮದುವೆಯಾದ ನಂತರವೂ ಸಹ ಹೊಸಕೆರೆಯ ಮನೆಗೆ ಬಂದು ಹೋಗುತ್ತಿದ್ದರು ಮತ್ತು ನನ್ನ ತಂದೆ ತಾಯಿ

ಮಧುಗಿರಿಯಲ್ಲಿರುವ ವಾದಿಯ ಮನೆಗೆ ಬಂದು ಹೋಗುತ್ತಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ.

12. ವಾದಿಯ ಅನುಪಸ್ಥಿತಿಯಲ್ಲಿ ನನ್ನ ತಂದೆ ತಾಯಿಯ ಅನಕ್ಷರತೆಯನ್ನು ದುರುಪಯೋಗ ಪಡಿಸಿಕೊಂಡು ದಿ:21.02.2011, ದಿ:08.08.2011, ದಿ:03.12.2012 ರ ಕ್ರಯಪತ್ರಗಳನ್ನು ಮತ್ತು ದಿ:18.04.2012, ದಿ:23.05.2013 ಮತ್ತು ದಿ:11.12.2014 ರ ಧಾನಪತ್ರಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೀರಿ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಾಯಿ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯುತ್ತಾರೆಯೇ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ವಿಚಾರಿಸುತ್ತೇನೆ ಎಂದು ಉತ್ತರಿಸುತ್ತಾರೆ. ಪ್ರಸ್ತುತ 4 ನೇ ಪ್ರತಿವಾದಿ ಯಾರೊಂದಿಗೆ ವಾಸವಾಗಿರುತ್ತಾರೆ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ನನ್ನೊಂದಿಗೆ ವಾಸವಾಗಿರುತ್ತಾರೆ ಎಂದು ಉತ್ತರಿಸಿ ಮುಂದುವರೆದು ನನ್ನ ಮತ್ತು ವಾದಿಯ ಇಬ್ಬರೊಂದಿಗೂ ವಾಸವಾಗಿರುತ್ತಾರೆ ಎಂದು ಉತ್ತರಿಸುತ್ತಾರೆ. ನನ್ನ ತಾಯಿಗೆ ಬುದ್ಧಿ ಜ್ಞಾನ ಮತ್ತು ವ್ಯವಹಾರದ ಜ್ಞಾನ ಇರುತ್ತದೆ.

13. ದಾವಾ ಸ್ವತ್ತುಗಳು ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಗಳ ಒಟ್ಟು ಕುಟುಂಬದ ಆಸ್ತಿಗಳು ಎಂದು ಸೂಚಿಸುವುದು ಸರಿಯಲ್ಲ. ಫೆಬ್ರವರಿ 2014 ರಲ್ಲಿ ವಾದಿ ದಾವಾ ಸ್ವತ್ತುಗಳಲ್ಲಿನ ತನ್ನ ಪಾಲನ್ನು ಕೊಡುವಂತೆ ನಿಮ್ಮನ್ನು ಕೇಳಿರುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ವಾದಿ ತನ್ನ ಪಾಲನ್ನು ಕೇಳಿದಾಗ ನಾನು ನನ್ನ ತಂದೆ ತಾಯಿ ಮತ್ತು 2 ನೇ ಪ್ರತಿವಾದಿ ಒಟ್ಟಿಗೆ ದಾವಾ ಸ್ವತ್ತುಗಳಲ್ಲಿ ವಾದಿಗೆ ಪಾಲನ್ನು ಕೊಡುವುದಿಲ್ಲ ಎಂದು ಹೇಳಿರುತ್ತೀರ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತುಗಳು ನನ್ನ, ನನ್ನ ತಂದೆ ಮತ್ತು

ತಾಯಿಯ ಸ್ವಯಾರ್ಜಿತ ಆಸ್ತಿಗಳು ಆಗಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರವರು ಖರೀದಿ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ.

14. ದಾವಾ ಸ್ವತ್ತುಗಳಲ್ಲಿ ವಾದಿಗೆ ಪಾಲನ್ನು ಕೊಡಬಾರದು ಎಂಬ ಉದ್ದೇಶದಿಂದ ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ಮತ್ತು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ